20 ಲಕ್ಷ ಅನುದಾನವನ್ನು ನಿಗದಿಗೊಳಿಸಲಾಗಿದೆ.

ಆ) ಉದ್ಭವಿಸುವುದಿಲ್ಲ

ವಾರ್ಸಾ ಮತ್ತು ಪೋಡಿ ಉಚಿತವಾಗಿ ಮಾಡುವುದು

479 (875) ಶ್ರೀ ದಿನಕರ ಕೇಶವ ಶೆಟ್ಟಿ (ಕುಮಟ):–ಮಾನ್ಯ ಮುಖ್ಯಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕಂದಾಯ ಇಲಾಖೆಯಲ್ಲಿ ವಾರ್ಸಾ ಮತ್ತು ಪೋಡಿಗಾಗಿ ರೂ. 600/– ಗಳನ್ನು ಪಡೆಯುತ್ತಿರುವುದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಹಿಂದಿನಂತೆ ಉಚಿತವಾಗಿ ವಾರ್ಸಾ ಮತ್ತು ಪೋಡಿಯನ್ನು ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಡಿ. ವಿ. ಸದಾನಂದಗೌಡ (ಮುಖ್ಯಮಂತ್ರಿಗಳು):–

ಅ) ವಾರ್ಸಾ ಪ್ರಕರಣಗಳಿಗೆ ಸಂಬಂಧಿಸಿದಂತೆ ನಕ್ಷೆಯಿಂದ ವಿನಾಯಿತಿ ನೀಡಿರುವುದರಿಂದ ಈ ಬಗ್ಗೆ ಶುಲ್ಕವನ್ನು ಸಂದಾಯ ಮಾಡಿಸಿಕೊಳ್ಳುತ್ತಿರುವುದಿಲ್ಲ ನೋಂದಣಿ ಪೂರ್ವ ನಕ್ಷೆಗಳಿಗೆ ಸಂಬಂಧಿಸಿದಂತೆ ರೂ. 600–00 ಗಳನ್ನು ಸಂದಾಯ ಮಾಡಿಸಿಕೊಂಡು ನಕ್ಷೆಯನ್ನು ವಿತರಿಸಲಾಗುತ್ತಿದೆ. ನೋಂದಣಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಸಂಯೋಜಿತ ಮ್ಯುಟೇಷನ್ ಪೋಡಿಯಲ್ಲಿ ವಿತರಿಸಲಾದ ನಕ್ಷೆಗೆ ಸಂಬಂಧಿಸಿದಂತೆ ಪೋಡಿ ಕೆಲಸವನ್ನು ಪೂರ್ಣಗೊಳಿಸುತ್ತಿರುವುದರಿಂದ ರೈತರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗುತ್ತಿರುವುದು ಕಂಡುಬರುತ್ತಿಲ್ಲ.

ಆ) ಸಾರ್ವಜನಿಕರು/ಭೂಹಿಡುವಳಿದಾರರುಗಳು ತಮ್ಮ ಜಮೀನಿನ ಅಳತೆ ಕಾರ್ಯವನ್ನು ಆದ್ಯತೆ ಮೇರೆಗೆ ಜೇಷ್ಠತೆ ಮೀರಿ ಮಾಡಿಸಿಕೊಳ್ಳಲು ಇಚ್ಛಿಸಿದಲ್ಲಿ ಶುಲ್ಕ ಪಾವತಿಸಿಕೊಂಡು ಮಾಡಿಸಿಕೊಳ್ಳಲು ಸರ್ಕಾರವು ತತ್ಕಾಲ್, ಮ್ಯುಟೇಶನ್ ಪೂರ್ವ ನಕ್ಷೆ ಯೋಜನೆಗಳನ್ನು ಜಾರಿಗೆ ತಂದಿರುತ್ತದೆ.

ಈ ಯೋಜನೆಯ ಪ್ರಯೋಜನ ಪಡೆಯಲು ಆಸಕ್ತರು, ನಿಗದಿತ ಶುಲ್ಕ

ಪಾವತಿಸಿ, ಯೋಜನೆಯನ್ವಯ ದಾಖಲೆಗಳನ್ನು ದುರಸ್ಥಿ ಪಡಿಸಿಕೊಳ್ಳಬಹುದಾಗಿರುತ್ತದೆ.

ಮ್ಯುಟೇಶನ್ ಪೂರ್ವ ನಕ್ಷೆ ಕೋರಿಕೆಯು ಪ್ರತಿ ಅರ್ಜಿಗೆ ರೂ. 600–00 ಮತ್ತು ತತ್ಕಾಲ್ ಪೋಡಿ ಪ್ರತಿ ಅರ್ಜಿಗೆ ರೂ. 500.00 ಗಳನ್ನು ಸಂಗ್ರಹಿಸಲಾಗುತ್ತಿದ್ದು, ಈ ರೀತಿ ಸಂಗ್ರಹವಾದ ಹಣದಲ್ಲಿ ಈ ಪ್ರಕರಣಗಳಲ್ಲಿ ಅಳತೆ ಕೆಲಸ ಪೂರೈಸಿದ ಪರವಾನಗಿ ಭೂಮಾಪಕರುಗಳಿಗೆ ಪ್ರತಿ ಅರ್ಜಿಗೆ ರೂ. 300–00 ರಂತೆ ಸೇವಾ ಶುಲ್ಕವನ್ನು ಪಾವತಿಸಲಾಗುತ್ತಿದೆ.

ಉಳಿಕೆಯಿಂದ ಸಂಗ್ರಹವಾದ ಹಣದಿಂದ ಮೇಲಿನ ಯೋಜನೆಗಳನ್ವಯ ಅಧ್ಯತೆ ಮೇರೆಗೆ ದುರಸ್ಥಿಗೆ ಅರ್ಜಿಸಲ್ಲಿಸಲಾಗದವರುಗಳ ಹಕ್ಕುದಾರಿಕೆಗಳನ್ನು ದುರಸ್ಥಿಪಡಿಸಲು.

1) ಹಕ್ಕುದಾರರಿಂದ ಯಾವುದೇ ಅರ್ಜಿಗಳನ್ನು ಅಪೇಕ್ಷಿಸದೆ

2) ಜೇಷ್ಠತೆ ಆಧಾರದ ಮೇಲೆ

3) ಯಾವುದೇ ಶುಲ್ಕ ವಸೂಲಿ ಮಾಡದೆ

ಉಚಿತವಾಗಿ ದುರಸ್ಥಿ ಕೆಲಸವನ್ನು ನಿರ್ವಹಿಸಲಾಗುತ್ತಿದೆ

ಅಕ್ರಮ ಗಣಿಗಾರಿಕೆ

484 (33) ಡಾ॥ ಮಹದೇವಪ್ಪ ಹೆಚ್. ಸಿ. (ಟಿ. ನರಸೀಪುರ):–ಮಾನ್ಯ ಮುಖ್ಯಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಎಷ್ಟು ಗಣಿ ಕಂಪೆನಿಗಳಿವೆ; ಅವುಗಳಲ್ಲಿ ಖಾಸಗಿ ಹಾಗೂ ಸರ್ಕಾರದ ಕಂಪೆನಿಗಳೆಷ್ಟು; ಈ ಗಣಿ ಕಂಪೆನಿಗಳು ಮೈನಿಂಗ್ ಪ್ಲಾನಿಂಗ್ ಪ್ರಕಾರ ಗಣಿಗಾರಿಕೆಯನ್ನು ನಡೆಸಲಾಗುತ್ತಿದೆಯೇ) ಮಾಹಿತಿ ನೀಡುವುದು);

ಆ) ಪಟ್ಟ ಕಂದಾಯ ಮತ್ತು ಅರಣ್ಯ ಪ್ರದೇಶಗಳನ್ನೊಳಗೊಂಡಂತೆ ಎಷ್ಟು ಎಕರೆ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲಾಗಿದೆ (ಮಾಹಿತಿ ನೀಡುವುದು);

ಇ) ಅಕ್ರಮ ಗಣಿಗಾರಿಕೆ ತಡೆಯಲು ಪ್ರಮುಖ ಇಲಾಖೆಗಳಾದ ಗಣಿ ಮತ್ತು ಭೂವಿಜ್ಞಾನ ಇಲಾಖೆ, ಅರಣ್ಯ ಇಲಾಖೆ, ಕಂದಾಯ ಇಲಾಖೆಗಳು ಯಾವುದೇ ಕ್ರಮ